**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ.ನಂ. 17299/2020**

**ಚಾಸಾ-1 ಪ್ರಾಸಾ-2**

| | |
|---|---|
| **ಸಾಕ್ಷಿದಾರರ ಹೆಸರು** | **ರವಿ ಪಾಟೀಲ್** |
| **ತಂದೆಯ/ಗಂಡನ ಹೆಸರು** | **ಸಂಗನಗೌಡ ಪಾಟೀಲ್** |
| **ವಯಸ್ಸು** | **42 ವರ್ಷ** |
| **ಉದ್ಯೋಗ** | **ಪಿಐ ಸಿಐಡಿ, ಬೆಂಗಳೂರು** |
| **ವಾಸ** | **ಬೆಂಗಳೂರು** |
| **ಪ್ರ ವ ಬೊ ದಿನಾಂಕ** | 16/07/2022 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ದಿ. 04/09/2019 ರಿಂದ 29/05/2022 ರ ವರೆಗೆ ಬೆಂಗಳೂರು ಸಿಸಿಬಿ ಘಟಕದಲ್ಲಿ ಪಿಐಯಾಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ 03/04/2020 ರಂದು ಮಧ್ಯಾಹ್ನದ ಸಮಯದಲ್ಲಿನನಗೆ ಅಕ್ರಮ ಮಧ್ಯ ಮಾರಾಟದ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ಸದರಿ ವಿಷಯವನ್ನು ನಾನು ನಮ್ಮ ಸಿಬ್ಬಂದಿಗಳಾದ ಚಾಸಾ.4 ರಿಂದ 7 ರವರಿಗೆ ಮಾಹಿತಿ ತಿಳಿಸಿ, ದಾಳಿ ಮಾಡಲು ನಾನು ಚಾಸಾ.5 ರವರ ಮೂಲಕ ಚಾಸಾ.2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ನನ್ನ ಜೊತೆ ಪಂಚರು ಮತ್ತು ಚಾಸಾ.4 ರಿಂದ 7 ರವರನ್ನು ಕರೆದುಕೊಂಡು ನಾವು ನಮ್ಮ ಅಂಗಶೋಧನೆ ಮಾಡಿಕೊಂಡು, ಸುಮಾರು 06.15 ಕ್ಕೆ ಕಚೇರಿಯಿಂದ ಹೊರಟು ಬಾತ್ಮೀ ಬಂದ ಸ್ಥಳಕ್ಕೆ ಹೋಗಿ ಮರೆಯಾಗಿ ನಿಂತು, ಚಾಸಾ.4 ರವರಿಗೆ ನಾನು ಸೂಚನೆ ನೀಡಿ ಆರೋಪಿತರು ಬಂದ ಕೂಡಲೇ ಸೂಚನೆ ನೀಡುವಂತೆ ತಿಳಿಸಿದ್ದು, ಅದರಂತೆ ಎರಡು ಮೋಟಾರು ಸೈಕಲ್ ನಲ್ಲಿ 4 ಜನ ಅಸಾಮಿಗಳು ಬಂದಿದ್ದು, ನನ್ನ ಸೂಚನೆಯಂತೆ ಚಾಸಾ.4 ರವರು ಆರೋಪಿತರ ಬಳಿ ಹೋಗಿ ಮಾತನಾಡುತ್ತಾ ನಮಗೆ ಸೂಚನೆ ನೀಡಿದ್ದು, ಅದರಂತೆ ನಾವು ಆರೋಪಿತರನ್ನು ಸುತ್ತುವರೆದು ಹಿಡಿದುಕೊಂಡಿದ್ದು, ಆ ಪೈಕಿ ಮೂರು ಜನ ಆರೋಪಿತರಾದ ಶರವಣ್, ಶಿವಕುಮಾರ್, ದಿಲೀಪ್ ಕುಮಾರ್ ಮತ್ತು ಓಡಿಹೋದ ಅಸಾಮಿ ಚೇತನ್ ಎಂದು ತಿಳಿದು ಬಂದಿರುತ್ತದೆ. ನಾವು ಸದರಿ ಅಸಾಮಿಗಳನ್ನು ವಿಚಾರಿಸಲಾಗಿ ಮೂರು ಜನ ಆರೋಪಿತರು ತಮ್ಮ ಬಳಿ

ಬ್ಯಾಗ್ ಗಳನ್ನು ಹೊಂದಿದ್ದು, ಸದರಿ ಬ್ಯಾಗ್ ಗಳ ಬಗ್ಗೆ ವಿಚಾರಿಸಲಾಗಿ, ಅವರು ಲಾಕ್ ಡೌನ್ ಅವಧಿಯಲ್ಲಿ ಮಧ್ಯ ಮಾರಾಟ ಮಾಡುವಂತಿಲ್ಲ, ಅದ್ದರಿಂದ ತಮಗೆ ಪರಿಚಯವಿರುವ ಕೆಲವು ಜನರುಗಳಿಂದ ಮಿಲಿಟರಿ ಕ್ಯಾಂಟೀನ್ ನಿಂದ ಮದ್ಯದ ಬಾಟಲ್ ಗಳನ್ನು ಖರೀದಿ ಮಾಡಿ, ಅವುಗಳನ್ನು ದಿಲೀಪ್ ಕುಮಾರ್, ಶಿವ ಕುಮಾರ್ ಮತ್ತು ಚೇತನ್ ರವರ ಮೂಲಕ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ನಾವು ಪಂಚರ ಸಮಕ್ಷಮ ಅವರ ಬಳಿಯಿರುವ ಬ್ಯಾಗ್ ಗಳನ್ನು ಪರಿಶೀಲನೆ ಮಾಡಲಾಗಿ ಒಂದನೇ ಆರೋಪಿ ಶರವಣ ಬ್ಯಾಗ್ ನಲ್ಲಿ ತಲಾ 750 ಎಂ.ಎಲ್ ನ 10 ಟೀಚರ್ಸ್ ಸ್ಕಾಚ್ ವಿಸ್ಕಿ ಬಾಟಲ್ ಗಳು ಇದ್ದವು, ಸದರಿ 10 ಬಾಟಲ್ ಗಳು ಮತ್ತು ಆರೋಪಿತನ ಒಂದು ಮೈಕ್ರೋಮ್ಯಾಕ್ಸ್ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡಿರುತ್ತಾರೆ.

ಎರಡನೇ ಆರೋಪಿ ಶಿವಕುಮಾರ್ ಈತನ ಬ್ಯಾಗನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಲಾಗಿ ತಲಾ 750 ಎಂಎಲ್ ನ 3 ಜಾನಿ ವಾಕರ್ ಬ್ಲಾಕ್ ಲೇಬಲ್ ವಿಸ್ಕಿ ಬಾಟಲ್ ಗಳು ಇದ್ದವು ಸದರಿ 3 ಬಾಟಲ್ ಗಳು ಮತ್ತು ಆರೋಪಿತನ ಒಂದು ನೀಲಿ ಬಣ್ಣದ ವಿವೋ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡಿರುತ್ತಾರೆ.

ಮೂರನೇ ಆರೋಪಿ ದಿಲೀಪ್ ಕುಮಾರ್ ಈತನ ಬ್ಯಾಗನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಲಾಗಿ ತಲಾ 750 ಎಂಎಲ್ ನ 5 100 ಪೈಪರ್ ವಿಸ್ಕಿ ಬಾಟಲ್ ಗಳು ಇದ್ದವು ಸದರಿ 5 ಬಾಟಲ್ ಗಳು ಮತ್ತು ಆರೋಪಿತನ ಒಂದು ನೀಲಿ ಬಣ್ಣದ ವಿವೋ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡು ಆರೋಪಿತರು ಬಂದಿದ್ದ ಎರಡು ದ್ವಿ ಚಕ್ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡು, ಸಂಜೆ 06.30 ರಿಂದ ರಾತ್ರಿ 08 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ನಂತರ ಮಾಲು ಮತ್ತು ಆರೋಪಿತರ ಸಮೇತ ಬಸವನಗುಡಿ ಪೊ.ಠಾಣೆಗೆ ಹೋಗಿ ಚಾಸಾ.9 ರವರ ಮುಂದೆ ದೂರು ದಾಖಲು ಮಾಡಿರುತ್ತೇನೆ. ಪಂಚರಿಗೆ ನೀಡಿದ ನೋಟಿಸನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು,

ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ದೂರನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಆ ದಿನ ನಾನು ಆರೋಪಿತರಿಂದ ಅಮಾನತ್ತು ಪಡಿಸಿಕೊಂದಡ ಮಧ್ಯದ ಬಾಟಲ್ ಗಳ ಪೈಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದ ಮೂರು ಸ್ಯಾಂಪಲ್ ಬಾಟಲ್ ಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಪ್ರತ್ಯೇಕವಾಗಿ ಮೂ.ಮಾ-1 ರಿಂದ 3 ಎಂದು ಗುರುತಿಸಲಾಗಿದೆ. ಆರೋಪಿತರಿಂದ ಮೊಬೈಲ್ ಮತ್ತು ಮೋಟರ್ ಸೈಕಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಒಂದು, ಮೂರು ಮತ್ತು ನಾಲ್ಕನೇ ಆರೋಪಿತರ ಪರ ಶ್ರೀ ಎಚ್.ಕೆ.ಸಿ ವಕೀಲರಿಂದಃ**

ನಾನು ಪಂಚರ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದಿಲ್ಲ. ನಾವು ಮಾಹಿತಿ ಬಂದ ಸ್ಥಳಕ್ಕೆ ಎಷ್ಟು ಗಂಟೆಗೆ ಹೋದೆವು ಎಂಬ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನಾವು ನಮ್ಮ ಸರ್ಕಾರಿ ಜೀಪ್ ನಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ವಾಹನದ ನಂಬರ್ ನ್ನು ನಾನು ದೂರಿನಲ್ಲಿ ತಿಳಿಸಿಲ್ಲ ಎಂದರೆ ಸರಿ. ಪೈ ವಿಸ್ತಾ ಹೋಟೆಲ್ ಬಳಿಯಿದ್ದ ಸಿಸಿಟಿವಿ ಫುಟೇಜ್ ಗಳನ್ನು ನಾವು ಪರಿಶೀಲನೆ ಮಾಡಿರುವುದಿಲ್ಲ ಮತ್ತು ಎರಡು ಬೈಕ್ ನಲ್ಲಿ 4 ಜನ ಅಸಾಮಿಳು ಬಂದ ಬಗ್ಗೆ ನಾವು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆ ದಿನ ಚಾಸಾ.4 ರವರು ನಮಗೆ ಬಲಗೈ ಎತ್ತಿ ಸನ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಓಡಿಹೋದ ವ್ಯಕ್ತಿಯ ಚಹರೆ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ಅದೇ ರೀತಿ ನಾವು ಹಿಡಿದುಕೊಂಡ ವ್ಯಕ್ತಿಗಳ ಚಹರೆ ಬಗ್ಗೆ ನಾನು ತಿಳಿಸಿರುವುದಿಲ್ಲ. ಓಡಿಹೋದ ವ್ಯಕ್ತಿಯ ವಿವರನ್ನು ಯಾರೋ ನನಗೆ ಹೇಳಿದ್ದಾರೆ ಎಂದು ನಾನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಒಂದನೇ ಆರೋಪಿತನ ಪೈಕಿ ಅಮನತ್ತು ಪಡಿಸಿಕೊಂಡ 10 ಬಾಟಲ್ ಗಳ ಪೈಕಿ ಒಂದು ಬಾಟಲ್ ನ್ನು ಸೀಲ್ ಮಾಡಿ ಪಂಚರ ಸಹಿ ಪಡೆದುಕೊಂಡಿರುತ್ತಾರೆ. ಒಂದು ಬಾಟಲ್ ನ್ನು ಪ್ರಬತ್ಯೇಕವಾಗಿ ಸ್ಯಾಂಪಲ್ ಗಾಗಿ ತೆಗೆದುಕೊಳ್ಳಲಾಯಿತು. ಬಾಟಲ್ ಮೇಲೆ ಬ್ಯಾಟಲ್ ಮೇಲೆ ನಮೂದು ಮಾಡಿದ್ದ ಸೀರಿಯಲ್ ನಂಬರ್ ನ್ನು ನಾನು ದೂರಿನಲ್ಲಿ ತಿಳಿಸಿಲ್ಲ. ಆರೋಪಿತರ ಬ್ಯಾಗ್ ನಲ್ಲಿ ಯಾವುದೇ ಮಧ್ಯದ ಬಾಟಲ್ ಗಳು ಇರಲಿಲ್ಲ ಮತ್ತು ನಾವು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮೊಬೈಲ್ ಫೋನ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಪಡಿಸಿಕೊಂಡ ಮು.ಮಾಲುಗಳ ಮೇಲೆ ನಾನು ಸೀರಿಯಲ್ ನಂಬರ್ ನಮೂದು

ಮಾಡಿರುವುದಿಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಾಹನಗಳನ್ನು ಅವರ ಮನೆ ಮುಂದೆ ಜಪ್ತಿ ಮಾಡಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ್ ಶಾಪ್ ಗೆ ಹೋಗುತ್ತಿದ್ದ ವ್ಯಕ್ತಿಗಳನ್ನು ಹಿಡಿದು ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೇಪಿತರಿಂದ ಯಾವುದೇ ಮು.ಮಾಲಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು : ಮೂರನೇ ಆರೋಪಿತರ ಶ್ರೀ ಎನ್.ಎನ್ ವಕೀಲರಿಂದಃ</u>**

ಮೂರನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆ ಇಲ್ಲ</u>**

**<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>**

**ಓ.ಹೇ.ಕೇ.ಸ.ಇದೆ**

**37 ನೇ ಎ.ಸಿ.ಎಂ.ಎಂ**